ಹಾಸನ ತಾಲ್ಲೂಕಿನಲ್ಲಿ ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ ರಿಸೀವಿಂಗ್ ಸ್ಟೇಷನ್ ತೆರೆಯುವ ಬಗ್ಗೆ.

1680 ಶ್ರೀ ಬಿ. ಶಿವರಾಮು. (ಗಂಡ್ಸಿ):- ಮಾನ್ಯ ಕೈಗಾರಿಕೆ, ಇಂಧನ ಮತ್ತು ವಕ್ಫ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ.

ಅ) ವಿಶ್ವ ಬ್ಯಾಂಕ್ ಯೋಜನೆಯಡಿಯಲ್ಲಿ 400 ಕಿ.ವಾ.ರಿಸೀವಿಂಗ್ ಸ್ಟೇಷನ್ ಹಾಸನ ತಾಲ್ಲೂಕಿನಲ್ಲಿ ತೆಗೆದುಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಆ) ಹಾಗಿದ್ದಲ್ಲಿ ಇದಕ್ಕೆ ಬೇಕಾಗುವ ಒಟ್ಟು 110 ಎಕರೆ ಜಮೀನನ್ನು ಸರ್ಕಾರ ಮಂಜೂರು ಮಾಡಿದೆಯೇ?

ಇ) ಈ ಯೋಜನೆ ಈಗ ಯಾವ ಹಂತದಲ್ಲಿದೆ.

ಈ) 100 ಕಿ.ವ್ಯಾಟ್ ಎಂ.ಯು.ಎಸ್.ಐ.ಯನ್ನು ಗಂಡಸಿಯಲ್ಲಿ (ಅರಸೀಕೆರೆ ತಾಲ್ಲೂಕು ಹಾಸನ ಜಿಲ್ಲೆ) ಪ್ರಾರಂಭಿಸುವ ಯೋಜನೆ ಇದೆಯೇ? ಇದು ಯಾವ ಹಂತದಲ್ಲಿದೆ?

ಉ) ಹಾಸನ ಜಿಲ್ಲೆ ಚನ್ನರಾಯಪಟ್ಟಣದಲ್ಲಿ ಕಾರ್ಯಪಾಲಕ ಅಭಿಯಂತರ ಡಿವಿಜನ್ ಮಾಡುವ ಆಶ್ವಾಸನೆಯನ್ನು ಈ ಹಿಂದಿನ ವಿದ್ಯುಚ್ಛಕ್ತಿ ಮಂತ್ರಿಗಳು ಕೊಟ್ಟಿದ್ದರು ಇದು ಯಾವ ಹಂತದಲ್ಲಿದೆ?

ಶ್ರೀ ಎಸ್.ಯಂ. ಯಾಹ್ಯ (ಕೈಗಾರಿಕ, ಇಂಧನ ಮತ್ತು ವಕ್ಫ ಮಂತ್ರಿಗಳು)

ಅ) 400 ಕೆ.ವಿ.ರಿಸೀವಿಂಗ್ ಸ್ಟೇಷನ್ ಒಂದನ್ನು ಹಾಸನ ತಾಲ್ಲೂಕಿನಲ್ಲಿ ಸ್ಥಾಪಿಸುವ ಪ್ರಸ್ತಾವನೆಯು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಮುಂದಿಲ್ಲ. ಆದರೆ ಸದರಿ 400 ಕೆ.ವಿ. ರಿಸೀವಿಂಗ್ ಸ್ಟೇಷನನ್ನು ಎನ್.ಟಿ.ಪಿ.ಸಿಯು (ಕೇಂದ್ರ ಸರ್ಕಾರದ) ನಿರ್ವಹಿಸುವ ಪ್ರಸ್ತಾವನೆ ಇರುತ್ತದೆ.

ಆ) ಹೌದು.

ಇ) ಈ ಬಗ್ಗೆ ಎನ್.ಟಿ.ಪಿ.ಸಿ.ಯಿಂದ ಮಾಹಿತಿಯನ್ನು ಪಡೆಯಲಾಗುತ್ತಿದ.

ಈ) ಗಂಡಸಿಯಲ್ಲಿ 110 ಕೆ.ವಿ. ಅಥವಾ 66 ಕೆ.ವಿ.ವಿದ್ಯುತ್ ಉಪ ಕೇಂದ್ರವೊಂದನ್ನು ಸ್ಥಾಪಿಸಲು ಕೆ.ಇ.ಬಿ.ಯು ಯೋಜಿಸಿದ್ದು, ಇದಕ್ಕೆ ಬೇಕಾದ ತಾಂತ್ರಿಕ ಪ್ರಸ್ತಾವನೆಯನ್ನು ಸಿದ್ಧಪಡಿಸಲಾಗುತ್ತಿದೆ.

ಉ) ಹಾಸನ ಜಿಲ್ಲೆಯ ಪ್ರಸ್ತುತ ಮಂಡಳಿಯ ಹಾಸನ ವಿಭಾಗವನ್ನು ವಿಭಜಿಸಿ ಚನ್ನರಾಯಪಟ್ಟಣದಲ್ಲಿ ಮಂಡಳಿಯ ಇನ್ನೊಂದು ಕಾರ್ಯ ನಿರ್ವಾಹಕ ಅಭಿಯಂತರರ ಕಛೇರಿಯನ್ನು ತೆರೆಯಲು ಪ್ರಸ್ತಾವನೆಯು ಮಂಡಳಿಯ ಪರಿಶೀಲನೆಯಲ್ಲಿದೆ.

ಶ್ರೀ ಬಿ. ಶಿವರಾಮು:- ಉತ್ತರ ಬಂದಿದೆ. ಈ ವಿಶ್ವಬ್ಯಾಂಕ್ ಯೋಜನೆಯಲ್ಲಿ 400 ಕೆ.ವಿ. ರಿಸೀವಿಂಗ್ ಸ್ಟೇಷನ್ ಅನ್ನು ಎನ್.ಟಿ.ಪಿ.ಸಿ.ಯವರು ಮಾಡುತ್ತಾರೆಂದು ಇಲ್ಲಿ ಹೇಳಿದ್ದಾರೆ. ಈಗಾಗಲೇ 119 ಎಕರೆ ಜಮೀನನ್ನು ಕೆ.ಇ.ಬಿ.ಯವರಿಗೆ ಕೊಟ್ಟಿದ್ದೀರಿ. ಈ ಪ್ರಾಜೆಕ್ಟ್ ಕಾಸ್ಟ್ ಎಷ್ಟು ಎಂದು ಕೇಳುತ್ತೇನೆ?

ಶ್ರೀ ಎಸ್.ಎಂ. ಯಾಹ್ಯಾ:- ಇಲ್ಲಿ ಎರಡು ಪ್ರಶ್ನೆಗಳು ಅಡಕವಾಗಿವೆ. ಮೊದಲನೆಯದು ಎನ್.ಟಿ.ಪಿ.ಸಿ.ಯವರು ಮಂಗಳೂರು ಸೂಪರ್ ಥರ್ಮಲ್ ಪ್ಲಾಂಟ್‌ನಿಂದ ಮಡಿಕೇರಿಗೆ ಲೈನ್ಸ್ ತಂದು ಅಲ್ಲಿಂದ ಹಾಸನಕ್ಕೆ ತಂದು, ಅಲ್ಲಿಂದ ಮುಂದೆ ಹೋಗುತ್ತದೆ. 220 ಕೆ.ವಿ.ಯ ದೊಡ್ಡ ಸ್ಟೇಷನ್ ಮಾಡಲಿಕ್ಕೆ ಅವರು ಹೊರಟಿದ್ದಾರೆ. ಅವರಿಗೆ 119 ಎಕರೆ ಜಮೀನನ್ನು ಸಹ ಕೊಡಬೇಕೆಂದು ಹೇಳಿ ನಾವು ಮಂಜೂರ್ಮಾಡಿದ್ದೇವೆ. ಇನ್ನೊಂದು ಕೆ.ಇ.ಬಿ.ಯಿಂದ ನಾವು ಅಲ್ಲಿ ಸಬ್ ಸ್ಟೇಷನ್ ಮಾಡುತ್ತಿದ್ದೇವೆ. ಆನಂತರ 220 ಕೆ.ವಿ. ಲೈನ್ ಅನ್ನು ಶಿವಮೊಗ್ಗದಿಂದ ಹಾಸನಕ್ಕೆ ತರುವ ಕೆಲಸ ಮಾಡುತ್ತಿದ್ದೇವೆ. ಅದಕ್ಕಾಗಿ ಒಂದು ಕಡೆ ಹತ್ತು ಕೋಟಿ ಒಂದು ಲಕ್ಷ ರೂಪಾಯಿ

ಕೊಡುತ್ತಿದ್ದೇವೆ. ಆದರಲ್ಲಿ 3 ಕೋಟಿ 30 ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರ್ಮಾಡಿದ್ದೇವೆ. ಈ ವರ್ಷದಿಂದಲೇ ಆ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. 220 ಕೆ.ವಿ. ಲೈನ್ ಎಳೆಯುವುದಕ್ಕೆ ಹತ್ತು ಕೋಟಿಯಲ್ಲಿ 3 ಕೋಟಿ 30 ಲಕ್ಷ ರೂಪಾಯಿ ಈ ಸಲ ಕೊಡುತ್ತಿದ್ದೇವೆ. ಆದಕ್ಕೆ ಸಬ್‌ಸ್ಟೇಷನ್ ಮಾಡಬೇಕೆಂದು 7 ಕೋಟಿ 16 ಲಕ್ಷ ರೂಪಾಯಿಗಳನ್ನು ಸಹ ಕೊಡುತ್ತಿದ್ದೇವೆ. ಈ ಲೈನ್ ಆದ ಹಾಗೆ ಆ ಕೆಲಸವನ್ನು ಸಹ ಪ್ರಾರಂಭಿಸುತ್ತೇವೆ. ದೊಡ್ಡ ಪ್ರಮಾಣದಲ್ಲಿ ಹಾಸನಕ್ಕೆ ಕೆ.ಇ.ಬಿ.ಯವರು ಹಣ ಖರ್ಚು ಮಾಡಿ ಒಳ್ಳೆಯ ವಿದ್ಯುಚ್ಛಕ್ತಿ ಕೊಡಬೇಕೆಂಬ ವಿಚಾರವನ್ನು ಈಗತಾನೇ ತೆಗೆದುಕೊಂಡಿದ್ದಾರೆ.

ಶ್ರೀ ಬಿ. ಶಿವರಾಮು:– ಇದು 220 ಕೆ.ವಿ. ಲೈನೋ ಅಥವಾ 400 ಕೆ.ವಿ ಲೈನೋ ಎಂಬುದನ್ನು ತಿಳಿಸಬೇಕು. ಉತ್ತರದಲ್ಲಿ 400 ಕೆ.ವಿ. ಲೈನ್ ಎಂದು ಹೇಳಿದ್ದಾರೆ.

ಶ್ರೀ ಎಸ್.ಎಂ. ಯಾಹ್ಯಾ:– ಇಲ್ಲಿ ಎರಡು ಪ್ರಶ್ನೆಗಳಿವೆ. 400 ಕೆ.ವಿ. ಲೈನ್ ಸೆಂಟ್ರಲ್ ಸೆಕ್ಟಾರ್‌ನಿಂದ ಮಂಗಳೂರು ಸೂಪರ್ ಥರ್ಮಲ್ ಪ್ಲಾಂಟ್‌ನಿಂದ ಬರುವುದು. ಆದರಿಂದ ನಿಮಗೆ ಪ್ರಯೋಜನವಾಗುವುದಿಲ್ಲ. ಅದು ಪಾಸ್ ಆಗಿ ಹೋಗುತ್ತದೆ. ಮಡಿಕೇರಿ ಹಾಸನ ಲೈನ್ ಆಗಿ ಬೆಂಗಳೂರಿಗೆ ಬರುತ್ತದೆ. ಆದರೆ ಕೆ.ಇ.ಬಿ.ಯವರು ಮಾಡುವುದು 220 ಕೆ.ವಿ. ಲೈನ್. ಆದು ಶಿವಮೊಗ್ಗದಿಂದ ಹಾಸನಕ್ಕೆ ಬರುತ್ತದೆ. ಆದಕ್ಕೆ ನಾವು ಟೆಂಡರ್ ಕರೆದಿದ್ದೇವೆ. ಹತ್ತು ಕೋಟಿ ಒಂದು ಲಕ್ಷ ರೂಪಾಯಿ ಕೆಲಸಯಾವುದು ಇದೆ, ಅದಕ್ಕೆ ಟೆಂಡರ್ ಕರೆದಿದ್ದೇವೆ.

ಶ್ರೀ ಬಿ. ಶಿವರಾಮು:– 110 ಕೆ.ವಿ.ಯ ರಿಸೀವಿಂಗ್ ಸ್ಟೇಷನ್‌ನ್ನು ಗಂಡಸಿಯಲ್ಲಿ ಮಾಡುವ ಉದ್ದೇಶವಿದೆ ಎಂಬುದಾಗಿ ತಿಳಿಸಿದ್ದೀರಿ. ಅದೇ ರೀತಿ ಹಾಸನ ಜಿಲ್ಲೆಯಲ್ಲಿ ಇನ್ನೊಂದು ಸಬ್ ಡಿವಿಜನ್ ಆನ್ನು ಅಂದರೆ ಎಗ್ಸಿಕ್ಯೂಟಿವ್ ಇಂಜಿನೀಯರ್ ಆಫೀಸನ್ನು ಈ ವರ್ಷದಲ್ಲೇ ತೆರೆಯುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ:– 110 ಕೆ.ವಿ. ರಿಸೀವಿಂಗ್ ಸ್ಟೇಷನ್ ಒಂದನ್ನು ನಾವು ಅರಸೀಕೆರೆಯಲ್ಲಿ ಮಾಡಬೇಕೆಂದಿದ್ದೇವೆ. ಆಮೇಲೆ ಸಬ್ ಡಿವಿಜನ್ ಆಫೀಸನ್ನು ಮಾಡುತ್ತೇವೆಂದು ಹೇಳಿದ್ದೇವೆ. ಈಗತಾನೆ ಆರ್ಡರ್ ಕೊಟ್ಟುಬಿಟ್ಟಿದ್ದೇವೆ. ಚೆನ್ನರಾಯಪಟ್ಟಣದಲ್ಲಿ ಹೊಸ ಡಿವಿಜನ್ ಮಾಡುವಂತಹ ಕಾರ್ಯಕ್ರಮದ ಬಗ್ಗೆ ಈಗಾಗಲೇ ಕೆ.ಇ.ಬಿ.ನವರಿಗೆ ಸೂಚನೆಯನ್ನು ಸಹ ಕೊಟ್ಟಿದ್ದೇವೆ.

ಶ್ರೀ ಬಿ. ಶಿವರಾಮು:– ದಯಮಾಡಿ ಗಂಡಸಿಯಲ್ಲೇ ಮಾಡಬೇಕು. ಆದರ ಬಗ್ಗೆ ಪುನರ್ ಪರಿಶೀಲನೆ ಮಾಡಬೇಕು.

ಶ್ರೀ ಎಸ್.ಎಂ. ಯಾಹ್ಯಾ:– ಗಂಡಸಿ ಅರಸೀಕೆರೆ ತಾಲ್ಲೂಕಿನಲ್ಲಿಯೇ ಬರುತ್ತದೆ.

ಶ್ರೀ ಗುರುದೇವ್:– ಮಾನ್ಯ ಮಂತ್ರಿಗಳು ಹಾಸನ ಜಿಲ್ಲೆಗೆ ಜಾಸ್ತಿ ಸೌಕರ್ಯವನ್ನು ಒದಗಿಸುತ್ತೇವೆಂದು ಹೇಳಿದ್ದಾರೆ. ಹಾಸನ ಜಿಲ್ಲೆ ಅರೆ ಮಲೆನಾಡು ಪ್ರದೇಶ. ಆದರೆ ಅದೇ ಜಿಲ್ಲೆಯ ಸಕಲೇಶಪುರ, ಹಾಗೂ ಆಲೂರು ತಾಲ್ಲೂಕುಗಳು ಪೂರ್ಣವಾಗಿ ಮಲೆನಾಡು ಪ್ರದೇಶ. ಈ ಎರಡು ತಾಲ್ಲೂಕುಗಳಲ್ಲಿ ಯಾವಾಗಲೂ ವಿದ್ಯುಚ್ಛಕ್ತಿ ಸರಬರಾಜು ಇರುವುದೇ ಇಲ್ಲ. ಮೊನ್ನೆ ತಾನೆ ಆಲೂರು ತಾಲ್ಲೂಕಿನ ಮೊಗ್ಗೆ ಎಂಬ ಹಳ್ಳಿಗೆ ಟ್ರಾನ್ಸ್‌ಫಾರ್ಮರ್ ಮಂಜೂರಾಗಿದ್ದು, ಕಾರಣಾಂತರದಿಂದ ಆದನ್ನು ಚಿಕ್ಕಮಂಗಳೂರಿಗೆ ವರ್ಗಾವಣೆ ಮಾಡಿದ್ದಾರೆ. ಈ ಎರಡು ತಾಲ್ಲೂಕಿನಲ್ಲಿ ಮಳೆಗಾಲದಲ್ಲಿ 6 ತಿಂಗಳು ಕರೆಂಟು ಇರುವುದಿಲ್ಲ. ಆದ್ದರಿಂದ ಬೇಸಿಗೆ ಕಾಲದಲ್ಲಾದರೂ ಕರೆಂಟು ಒದಗಿಸುವ ವ್ಯವಸ್ಥೆಯನ್ನು ಮಾಡುತ್ತೀರಾ?

ಶ್ರೀ ಎಸ್.ಎಂ. ಯಾಹ್ಯಾ:– ಮಾನ್ಯ ಸದಸ್ಯರು ಈ ಬಗ್ಗೆ ನನಗೂ ತಿಳಿಸಿದ್ದಾರೆ. ಆಲೂರು ತಾಲ್ಲೂಕಿನ ಮೊಗ್ಗೆ ಎಂಬ ಹಳ್ಳಿಗೆ ಟ್ರಾನ್ಸ್‌ಫಾರ್ಮರ್ ಬಂದಿದ್ದು ಆದು ಬೇರೆ ದಾರಿ ಹಿಡಿದುಕೊಂಡು ಹೋಗಿದೆ ಅಂತ ಹೇಳಿದ್ದಾರೆ. ಆದು ಎಲ್ಲಿ, ಹೇಗೆ ಹೋಯಿತು ಎಂಬುದನ್ನು ತಿಳಿದುಕೊಂಡು ನಿಮಗೂ ಆ ಟ್ರಾನ್ಸ್‌ಫಾರ್ಮರ್ ಸೌಕರ್ಯ ಸಿಕ್ಕಬೇಕೆಂದು ಕೆ.ಇ.ಬಿ.ನವರಿಗೆ ಸೂಚನೆಯನ್ನು ಕೊಡುತ್ತೇನೆ.